ಇದ್ದವನು. ನೀವು ಹಾರ್ವಪ್ಪೋರ ಅಂತ ಕರೀತಿದ್ದ ನಿಮ್ಮ ಭಾರ್ಗವ. ಸೊರಬದ ಹತ್ತಿರದ ನಂದಳಿಕೆಯವ...' ಆತನ ಮುಖದಲ್ಲಿ ಅರೆಬರೆ ಮಾಸಿದ ನೆನಪು ಹಾದು ಹೋದ ಸುಳಿವು. ಸ್ಪಷ್ಟ ಎಂದೂ ಹೇಳಲಾಗದ, ಅಸ್ಪಷ್ಟ ಎಂದೂ ಹೇಳಲಾಗದ ಅರೆಸ್ಫುಟ ನೆನಪು ಕಾಡಿತಿರಬೇಕು. ಮತ್ತೆ ಹೇಳಿದೆ 'ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಬ್ಯಾಂಡೇಜ್ ಕಟ್ಟಿಸಿಕೊಂಡ ಹುಡುಗನ ನೆನಪಾದರು ಇರಬೇಕಲ್ಲ ರಾಮಣ್ಣ?' ಎಂದದ್ದೆ ಆತನ ಮುಖ ಅರಳಿತು. 'ಹೌದು ಹೌದು...' ಎಂದ. ಗಲ್ಲಾಪೆಟ್ಟಿಗೆಯಿಂದ ಈಚೆ ಬಂದು, 'ನೀನು, ..ನೀನು ಅದೇ ಭಾರ್ಗವನಾ...' ಎನ್ನುತ್ತ ನನ್ನನ್ನ ಮುಟ್ಟುವ ಅಭಿಲಾಷೆಯಿದ್ದರೂ ಅಂತಸ್ತಿನ ಅಂತರ ಕಂಡವನಂತೆ ನನ್ನನ್ನ ಮುಟ್ಟಲು ಹಿಂಜರಿಯುವ ಆತನ ಹಿಂಜರಿಕೆ ದೂರ ಮಾಡಲು ನಾನೇ ಆತನ ಕೈಯನ್ನ ಹಿಡಿದು ಮಿದುವಾಗಿ ಅದುಮಿ ಅವನನ್ನು ತಬ್ಬಿದೆ. ಇಬ್ಬರೂ ಟೇಬಲೊಂದರ ಬಳಿ ಕುಳಿತಾಗ ಆತನ ಕಣ್ಣುಗಳಲ್ಲಿ ಕಂಡ ಆನಂದವನ್ನು ನಾನು ಗುರುತಿಸಬಲ್ಲವನಾಗಿದ್ದೆ. ಇಬ್ಬರಲ್ಲೂ ಹೇಳಿಕೊಳ್ಳುವ ಕತೆ ಬಹಳಷ್ಟಿತ್ತು. ಅದರ ಬೆನ್ನ ಹಿಂದೆ ಹಳೆಯ ನೆನಪುಗಳು ಧುಮ್ಮಿಕ್ಕುತ್ತಿದ್ದವು.

★★★

ಆರೋ ಏಳೋ ವರ್ಷದ ಹುಡುಗ. ಶಾಲೆಯೆಂದರೆ ಜೈಲು ಅನ್ನಿಸಲು ಶುರುವಾಗಿದ್ದು ಮಾತ್ರ ಒಂದು ವರ್ಷದ ನಂತರ. ಎರಡನೆಯ ವರ್ಷದಿಂದ ಶಾಲೆ ತಪ್ಪಿಸಿಕೊಳ್ಳಲು ಒಂದು ದಿನ ಜ್ವರದ ನಾಟಕವಾದರೆ ಒಂದು ದಿನ ಭೇದಿ, ಒಂದು ದಿನ ಕಾಲು ನೋವು. ಅದೆಲ್ಲ ಎಷ್ಟು ದಿನ ನಡೆದೀತು? ಅಪ್ಪನಿಗೆ ಸಿಟ್ಟು ಏರತೊಡಗಿತ್ತು. ನಾಲ್ಕು ದಿನ ಅಜ್ಜಿ, ಅಮ್ಮನ ಒತ್ತಾಯಕ್ಕೆ ಮಣಿದು ಸುಮ್ಮನಿದ್ದ ಅಪ್ಪಯ್ಯ ಮರುವಾರ ಸ್ಕೂಲಿಗೆ ಎಳೆದುಕೊಂಡೇ ಹೋಗಲು ಶುರು ಮಾಡಿದ. ಬರೋಲ್ಲ ಎಂದು ಹಟ ಹಿಡಿದು ಕುಳಿತವನ ರಟ್ಟೆ ಹಿಡಿದೆತ್ತಿ ದರದರನೆ ಎಳೆದುಕೊಂಡೇ ಹೋದ. ಒಂದನೇ ತರಗತಿಯಲ್ಲಿ ಶಾಲೆಗೆ ಹೋಗುವುದೆಂದರೆ ಖುಷಿಯಿಂದ ಓಡುತ್ತಿದ್ದ ಹುಡುಗ ಈಗೇಕೆ ಹೀಗೆ ಮಾಡುತ್ತಿದ್ದಾನೆ ಎಂದು ಮಾಟ ಮಂತ್ರ ನೋಡಿಸುವುದು, ಪ್ರಶ್ನೆ ಕೇಳುವುದು, ಜಾತಕ ತೋರಿಸುವುದು, ಪೂಜೆ–ಪುನಸ್ಕಾರ ಮಾಡಿಸುವುದು ಮುಂತಾದ ಕೆಲಸಗಳಾದವೇ ವಿನಃ ಮೂಲ ಕಾರಣದ ಕುರಿತು ಯಾರೂ ಯೋಚಿಸಲಿಲ್ಲ. ಶಾಲೆಯ ಹಿಂದಿನ ಗೋಡೆಯ ಸಂದಿನಲ್ಲಿ ಕಸ ಗುಡಿಸುವವಳೊಂದಿಗೆ ಲಲ್ಲೆ ಹೊಡೆಯುತ್ತ ಬೀಡಿ ಸೇದುತ್ತಿದ್ದ ಮಲ್ಲಾರಿ ಮೇಷ್ಟರನ್ನ ತಾನು ಕಂಡು ಉಳಿದ ಹುಡುಗರೊಂದಿಗೆ ಸೇರಿ ಕಿಸಕ್ ಎಂದು ನಕ್ಕಿದ್ದು ದೊಡ್ಡ ಅನಾಹುತವನ್ನೇ ತಂದಿತು. ಆವಾಗಿನಿಂದ ಮಲ್ಲಾರಿ ಮೇಷ್ಟ್ರ ಪಾಲಿಗೆ ಹುಡುಗ ಬದ್ಧ ವೈರಿಯಾದ. ಅವಾಗಿನಿಂದಲೇ ಕಿರಿಕ್ಕು ಶುರು. ಈ ಹುಡುಗ ನಿಂತರೂ ತಪ್ಪು, ಕೂತರೂ ತಪ್ಪು. ಅಪ್ಪ ಅಮ್ಮನಿಗೆ ಒಬ್ಬನೇ ಮಗನಾಗಿ, ಅಜ್ಜ ಅಜ್ಜಿಯರ ಮುದ್ದಿನ ಕೂಸಾಗಿ ಬೆಳೆದವನಿಗೆ ಸಹಜವಾಗಿಯೇ ಅತಿ ಹಟ, ಅಹಂಕಾರ ಬೆಳೆದು ಬಂದಿತ್ತು. ಆ ರೋಷದಲ್ಲಿಯೆ ಒಂದು ದಿನ ಏ ಬೀಡಿ ಮೇಷ್ಟ್ರೆ, ಇನ್ನು ನಿಮ್ಮ ಶಾಲೆಗೆ ನಾನು ಬರುವುದಿಲ್ಲ ಎಂದು ಸಡ್ಡು ಹೊಡೆದು ಬಂದಾಗಿತ್ತು. ಅದನ್ನೆಲ್ಲ ಹೇಳಿದರೆ ಮತ್ತಷ್ಟು ಹೊಡೆತ ಬಿದ್ದಾವು ಎಂದು, ಶಾಲೆಗೆ ಹೋಗುವುದಿಲ್ಲ, ಬೇಕಾದರೆ ತೋಟಕ್ಕೆ ಹೋಗಿ ಅಡಿಕೆ ಹೆಕ್ಕಿಕೊಂಡು ಬರುತ್ತೇನೆ ಎಂದು ಹಟ ಹಿಡಿದು ಕುಳಿತದ್ದು ಜಗ್ಗದ ಅಪ್ಪಯ್ಯ ಮತ್ತೆ ಎಳೆದುಕೊಂಡು ಶಾಲೆಗೆ ಬಿಟ್ಟು ಬಂದದ್ದು, ಮತ್ತೆ ಅದೇ ಮೇಷ್ಟ್ರ ಎದುರಿಗೆ, ಸಹಪಾಠಿಗಳ ಎದುರಿಗೆ ಸೆರೆ ಸಿಕ್ಕ ರಾಜನ ತರಹ ತಲೆ ತಗ್ಗಿಸಿ... ಊಹುಂ! ಅಹಂ ಹೆಡೆಯೆತ್ತಿ ಚೀರಿತು. ಸ್ವಲ್ಪ ಹೊತ್ತಿನಲ್ಲಿಯೆ ಒಂದಾ ಮಾಡಲಿಕ್ಕಲೆಂದು ಹೊರಬಂದವ ನಿಲ್ದಾಣದಲ್ಲಿ ಹೊರಡಲು ಸಿದ್ಧವಾಗಿದ್ದ ಬಸ್ಸೊಂದನ್ನು ಹತ್ತಿಯೇ ಬಿಟ್ಟ. ಎಲ್ಲಿಗೆ ಹೋಗುವುದು ಗೊತ್ತಿರಲಿಲ್ಲ. ಜೇಬಿನಲ್ಲಿ ನಯಾ ಪೈಸೆ ಇರಲಿಲ್ಲ. ಪಾಟೀಚೀಲ ಶಾಲೆಯಲ್ಲಿಯೇ ಉಳಿದಿತ್ತು. ಟಿಕೇಟು ಕೇಳಲು ಕಂಡಕ್ಟರು